**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ</u>**

**<u>ಸಿ.ಸಿ. ಸಂಖ್ಯೆ : 336/2023</u>**

**ಚಾಸಾ : 1**

**ಪ್ರಾಸಾ : 1**

| | |
|---|---|
| **ಹೆಸರು** | ಃ ಅನಂತು |
| **ತಂದೆ ಹೆಸರು** | ಃ ಸ್ವಾಮಿ |
| **ವಯಸ್ಸು** | ಃ 35 ವರ್ಷ |
| **ಉದ್ಯೋಗ** | ಃ ಕೂಲಿ |
| **ವಾಸಸ್ಥಳ** | ಃ ಕೆ ಆರ್ ನಗರ ತಾಲ್ಲೂಕು, ಮೈಸೂರು ಜಿಲ್ಲೆ |

**<u>ದಿನಾಂಕ ಃ 30-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಃ ಮಾನ್ಯ ಸ. ಸ. ಅ. ರವರಿಂದ</u>**

1. ಮೃತ ಅಂಜು ನನ್ನ ತಮ್ಮನಾಗಿರುತ್ತಾನೆ. ಚಾಸಾ2 ರಿಂದ 4 ರವರು ನಮ್ಮ ಸಂಬಂಧಿಕರು. ಚಾಸಾ7 ಹಾಗೂ 11 ರವರ ಪರಿಚಯವಿರುವುದಿಲ್ಲ. ಆರೋಪಿಯ ಪರಿಚಯವಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ತಮ್ಮನಾದ ಅಂಜು ಹೇಗೆ ಮೃತರಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ನಾನು ಯಾವುದೇ ದೂರನ್ನು ನೀಡಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದರಿಂದ ದೂರನ್ನು ನಿಪಿ1 ಎಂದು, ಸಾಕ್ಷಿಯ ಹೆಬ್ಬಟಿನ ಗುರುತನ್ನು ನಿಪಿ1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮಹಜರನ್ನು ತೋರಿಸಿ, ಸಾಕ್ಷಿಯು ಅದರಲ್ಲಿರುವ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದರಿಂದ, ಮಹಜರನ್ನು ನಿಪಿ2 ಎಂದು ಗುರುತಿಸಲಾಯಿತು. ಸಾಕ್ಷಿಯ ಹೆಬ್ಬಟಿನ ಗುರುತನ್ನು ನಿಪಿ2(ಎ) ಎಂದು ಗುರುತಿಸಲಾಯಿತು. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಮುಂದುವರೆದ ಹೇಳಿಕೆಯನ್ನು ನೀಡಿರುವುದಿಲ್ಲ.

***(ಈ ಹಂತದಲ್ಲಿ ಸ. ಸ. ಅ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

**ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

1. ದಿನಾಂಕ 21-02-2023 ರಂದು ನಾನು ವಿರಾಜಪೇಟೆ ನಗರ ಪೋಲಿಸ್ ಠಾಣೆಗೆ ಹೋಗಿ ಆರೋಪಿಯ ವಿರುದ್ದ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 21-02-2023 ರಂದು ನಾನು ಕೃತ್ಯ ಸ್ಥಳವನ್ನು ಹಾಗೂ ಬಿದ್ದಿದ್ದ ಮರವನ್ನು ತೋರಿಸಿಕೊಟ್ಟ ಮೇರೆಗೆ ಪೋಲಿಸರು ನನ್ನ, ಚಾಸಾ7 ಹಾಗು 11 ರವರ ಸಮಕ್ಷಮ ನಿಪಿ2 ರಂತೆ ಮಹಜರ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಅದೇ ದಿನ ಪೋಲಿಸರಿಗೆ ಮುಂದುವರೆದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಮುಂದುವರೆದ ಹೇಳಿಕೆಯನ್ನು ಓದಿ ಹೇಳಿದ್ದನ್ನು ನಿರಾಕರಿಸಿದ್ದರಿಂದ ಸದರಿ ಮುಂದುವರೆದ ಹೇಳಿಕೆಯನ್ನು ನಿಪಿ3 ಎಂದು ಗುರುತಿಸಲಾಯಿತು. ಆರೋಪಿಯೊಂದಿಗೆ ರಾಜೀ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ರಾಜೀ ಮಾಡಿಕೊಂಡಿರುವುದರಿಂದ ಆರೋಪಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲು ಃ ಆರೋಪಿ ಪರ ವಕೀಲರಿಂದ ಇರುವುದಿಲ್ಲ ಎಂದು ನುಡಿದಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಪ್ರದೀಪ ಪೋತದಾರ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ವಿರಾಜಪೇಟೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ**

**ಸಿ.ಸಿ. ಸಂಖ್ಯೆ : 336/2023**

ಚಾಸಾ : **2**

ಪ್ರಾಸಾ : **2**

| | | |
|---|---|---|
| **ಹೆಸರು** | : | ಮಂಜು |
| **ತಂದೆಯ ಹೆಸರು** | : | ನಂಜುಂಡ ಬೋವಿ |
| **ವಯಸ್ಸು** | : | 30 ವರ್ಷ |
| **ಉದ್ಯೋಗ** | : | ಕೂಲಿ ಕೆಲಸ |
| **ವಾಸಸ್ಥಳ** | : | ಹೊಸಳ್ಳಿ ಗ್ರಾಮ, ಕೆ ಆರ್ ನಗರ ತಾಲ್ಲೂಕು |

**ದಿನಾಂಕ : 30-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಸ. ಸ. ಅ. ರವರಿಂದ : -**

1. ಮೃತ ಅಂಜು ನನ್ನ ಸ್ನೇಹಿತ. ಚಾಸಾ-3 ನಮ್ಮ ಸಂಬಂಧಿಕರು. ಚಾಸಾ-4 ನನ್ನ ಅಣ್ಣ. ಆರೋಪಿಯ ಪರಿಚಯವಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ಸ್ನೇಹಿತನಾದ ಅಂಜು ಹೇಗೆ ಮೃತರಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ಘಟನೆಯನ್ನು ಖುದ್ದಾಗಿ ನೋಡಿರುವುದಿಲ್ಲ. ಈ ಪ್ರಕರಣದಲ್ಲಿ ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ಮುಖ್ಯ ವಿಚಾರಣೆ ಮುಕ್ತಾಯ.

(**ಈ ಹಂತದಲ್ಲಿ *ಸ. ಸ. ಅ.* ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು**.)

**ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

1. ದಿನಾಂಕ 21-02-2023 ರಂದು ಬೆಳಿಗ್ಗೆ ಸಮಯ 9 ಗಂಟೆಗೆ ನಾನು, ಚಾಸಾ1, 3 ಹಾಗೂ 4 ರವರು ಆರೋಪಿಯ ತೋಟಕ್ಕೆ ಕಾಫೀ ಹಾಗೂ ಒಳ್ಳೆ ಮೆಣಸನ್ನು ಕುಯ್ಯಲೆಂದು ಹೋಗಿದ್ದು, ಒಂದು ಮರಕ್ಕೆ ಒಂದು ನಾನು ಹಾಗೂ ಮೃತ ಅಂಜು ಇದ್ದು, ಇನ್ನೊಂದು ಮರಕ್ಕೆ ಚಾಸಾ3 ಹಾಗೂ 4 ರವರು ಹತ್ತಿ ಮೆಣಸು ಕುಯ್ಯುತ್ತಿರುವಾಗ ಸಮಯ ಬೆಳಿಗ್ಗೆ 9.45 ಗಂಟೆಗೆ ನಾನು ಹಾಗುಾ ಮೃತ ಅಂಜು ರವರು ಹತ್ತಿದ್ದ ಮರವು ಬುಡದಿಂದ

ತುಂಡಾಗಿ ಕೆಳಗೆ ಬಿದ್ದರಿಂದ ನಾನು ಹಾಗೂ ಮೃತ ಅಂಜು ಸುಮಾರು 15 ಅಡಿ ಎತ್ತರದಿಂದ ನೆಲದ ಮೇಲೆ ಬಿದ್ದಾಗ ನನ್ನ ಎಡಗೈ ತೋಳಿಗೆ ಪೆಟ್ಟಾಗಿರುತ್ತದೆ ಹಾಗುಾ ಮೃತ ಅಂಜುವಿನ ತಲೆ ಹಾಗೂ ಶರೀರದ ಭಾಗಗಳಿಗೆ ಪೆಟ್ಟಾಗಿರುತ್ತದೆ ಎಂದರೆ ಸರಿಯಲ್ಲ. ನಂತರ ಆರೋಪಿಯು ಅವರ ಕಾರಿನಲ್ಲಿ ನನ್ನನ್ನು ಹಾಗೂ ಮೃತ ಅಂಜುವನ್ನು ವಿರಾಜಪೇಟೆ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಸಮಯ ಸುಮಾರು 11.20 ಗಂಟೆಗೆ ಮೃತ ಅಂಜು ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಈ ಕುರಿತು ಚಾಸಾ1 ರವರು ಪೋಲಿಸರಿಗೆ ದೂರನ್ನು ನೀಡಿರುತ್ತಾರೆ ಎಂದರೆ ನನಗೆ ಆ ಬಗ್ಗೆ ಗೊತ್ತಿರುವುದಿಲ್ಲ. ಈ ಕುರಿತು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯನ್ನು ಓದಿ ಹೇಳಿದ್ದನ್ನು ನಿರಾಕರಿಸಿದ್ದರಿಂದ ಸದರಿ ಹೇಳಿಕೆಯನ್ನು ನಿಪಿ4 ಎಂದು ಗುರುತಿಸಲಾಯಿತು. ಆರೋಪಿಯೊಂದಿಗೆ ರಾಜೀ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ರಾಜೀ ಮಾಡಿಕೊಂಡಿರುವುದರಿಂದ ಆರೋಪಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಸಿ ಬಿ ಎ ವಕೀಲರಿಂದಃ-**

ಪಾಟಿ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಪ್ರದೀಪ ಪೋತೆದಾರ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.